ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE 22/1/2021

### ಬೊಮ್ಮಾಯಿಗೆ ಬೋನಸ್, ಮಾಧುಸ್ವಾಮಿ, ನಾರಾಯಣಗೌಡಗೆ ಲಾಸ್ | ಸುಧಾಕರ್ ಸಹಿತ ಮೂವರ ಖಾತೆಗೆ ಕತ್ತರಿ

# ನೂತನ ಸಚಿವರಿಗೆ ಖಾತೆ, ಹಳಬರಿಗೆ ಬದಲಾವಣೆ ಭಾಗ್ಯ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಸಿಎಂ ಯಡಿಯೂರಪ್ಪ ಸಚಿವ ಸಂಪುಟಕ್ಕೆ ಸೇರಿದ 7 ಜನರಿಗೆ ಎಂಟು ದಿನಗಳ ಬಳಿಕ ಖಾತೆ ಭಾಗ್ಯ ಲಭಿಸಿದೆ. ಹಾಲಿ ಸಚಿವರ ಪೈಕಿ ಐವರ ಖಾತೆಗಳನ್ನು ಬದಲಾಯಿಸಿ ಮರು ಹಂಚಿಕೆ ಮಾಡಲಾಗಿದೆ. ಬಿಎಸ್‌ವೈ ಸಚಿವ ಸಹೋದ್ಯೋಗಿಗಳ ಜತೆ ಚರ್ಚಿಸಿ, ಅಳಿದು-ಸುರಿದು ಖಾತೆಗಳ ಹಂಚಿಕೆ ಪಟ್ಟಿಯನ್ನು ರಾಜಭವನಕ್ಕೆ ರವಾನಿಸಿದ್ದರು. ರಾಜ್ಯಪಾಲ ವಜುಭಾಯಿ ವಾಲಾ ಅಸ್ತು ಎಂದಿದ್ದು, ಗುರುವಾರ ಈ ಕುರಿತು ಅಧಿಸೂಚನೆ ಪ್ರಕಟವಾಗಿದೆ.



ಬೆಂಗಳೂರು ನಗರಾಭಿವೃದ್ಧಿ, ಇಂಧನ ಖಾತೆಗಳನ್ನು ಯಡಿಯೂರಪ್ಪ ತಮ್ಮ ಬಳಿಯೇ ಉಳಿಸಿಕೊಂಡಿದ್ದು, ಇವುಗಳ ಮೇಲೆ ಕಣ್ಣಿಟ್ಟಿದ್ದ ಆರ್.ಅಶೋಕ್, ಡಾ. ಅಶ್ವತ್ಥನಾರಾಯಣ, ಅರವಿಂದ ಲಿಂಬಾವಳಿಗೆ ನಿರಾಸೆಯಾಗಿದೆ. ಹಾಲಿ ಐವರು ಸಚಿವರ ಖಾತೆಗಳನ್ನು ಬದಲಿಸಿ ಮರುಹಂಚಿಕೆ ಮಾಡಲಾಗಿದ್ದರೆ, ಮೂವರು ಸಚಿವರ ಬಳಿಯಿದ್ದ ಹೆಚ್ಚುವರಿ ಖಾತೆಗೆ ಕತ್ತರಿ ಪ್ರಯೋಗವಾಗಿದೆ. ಒಬ್ಬರಿಗೆ ಹೆಚ್ಚುವರಿ ಖಾತೆ ನೀಡಲಾಗಿದ್ದರೆ, ಮತ್ತೊಬ್ಬರ ಹೆಚ್ಚುವರಿ ಖಾತೆ ಅದಲು ಬದಲಾಗಿದೆ.

ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೆಚ್ಚುವರಿ ಆಗಿ ಕಾನೂನು-ಸಂಸದೀಯ ವ್ಯವಹಾರ ಖಾತೆ ಪಡೆದಿದ್ದಾರೆ. ಸಣ್ಣ ನೀರಾವರಿ ಕಳೆದುಕೊಂಡು ಮಾಧುಸ್ವಾಮಿ ವೈದ್ಯಕೀಯ ಶಿಕ್ಷಣ, ಸಂಸ್ಕೃತಿ ಖಾತೆಗೆ ಶಿಫ್ಟ್ ಆಗಿದ್ದಾರೆ. ಕೋಟ ಶ್ರೀನಿವಾಸ ಪೂಜಾರಿ ಬಳಿಯೇ ಮುಜರಾಯಿ ಉಳಿಸಿ, ಹೆಚ್ಚುವರಿಯಾಗಿದ್ದ ಮೀನುಗಾರಿಕೆ, ಬಂದರು ಹಿಂಪಡೆದು ಹಿಂದುಳಿದ ವರ್ಗಗಳ ಖಾತೆ ನೀಡಲಾಗಿದೆ. ಬಂದರು, ಮೀನುಗಾರಿಕೆ ಖಾತೆ ಎಸ್.ಅಂಗಾರ ಪಾಲಾಗಿದೆ.

## ಕಣ್ಣೀರಿಟ್ಟ ಗೋಪಾಲಯ್ಯ

**ಆಹಾರ ಇಲಾಖೆ ಕಳೆದುಕೊಂಡ ಸಚಿವ ಗೋಪಾಲಯ್ಯ ಬೇಸರದಲ್ಲಿ ಕಣ್ಣೀರು ಸುರಿಸಿದ್ದಾರೆ. ಅತೃಪ್ತ ಸಚಿವರ ಸಭೆಯಲ್ಲಿ ಭಾವುಕರಾಗಿದ್ದ ಅವರು, ಕರೊನಾ ಸಂದರ್ಭ ಶ್ರಮ ಹಾಕಿ ಕೆಲಸ ಮಾಡಿದೆ. ನನ್ನ ಕೆಲಸಕ್ಕೆ ಪ್ರತಿಫಲ ಇಲ್ಲದಂತೆ ಮಾಡಿಬಿಟ್ಟರು. ಕನಿಷ್ಠ ಚರ್ಚೆಯನ್ನೂ ಮಾಡದೆ ಏಕಾಏಕಿ ಖಾತೆ ಬದಲಿಸಿ ಅನ್ಯಾಯ ಮಾಡಿದರು, ತಪ್ಪು ಮಾಡಿಬಿಟ್ಟೆ ಎನಿಸುತ್ತಿದೆ ಎಂದು ಗೋಪಾಲಯ್ಯ ಬೇಸರ ಹೊರಹಾಕಿದರೆಂದು ತಿಳಿದುಬಂದಿದೆ.**



## ಆಡಳಿತದಲ್ಲಿ ನನ್ನ ಹಸ್ತಕ್ಷೇಪವಿಲ್ಲ

**ಕಲಬುರಗಿ:** ಸಚಿವ ಸಂಪುಟ ವಿಸ್ತರಣೆ ನಂತರ ಹೊಸಬರಿಗೆ ಖಾತೆ ಹಂಚಿಕೆ ಸೇರಿ ಆಡಳಿತಕ್ಕೆ ಸಂಬಂಧಿಸಿದ ಎಲ್ಲ ನಿರ್ಧಾರಗಳನ್ನು ಮುಖ್ಯಮಂತ್ರಿ ಯಡಿಯೂರಪ್ಪ ಅವರೇ ತೆಗೆದುಕೊಳ್ಳುತ್ತಾರೆ. ನನ್ನ ಮೇಲಾಗಲಿ ಇಲ್ಲವೇ ಬೇರೆ ಯಾರ ಮೇಲೂ ಡಿಪೆಂಡ್ ಆಗಿಲ್ಲ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು. ಸಂಪುಟಕ್ಕೆ ಹೊಸದಾಗಿ ಸೇರ್ಪಡೆಗೊಂಡ ಸಚಿವರು ಹಾಗೂ ಖಾತೆ ಬದಲಾವಣೆ ಬಗ್ಗೆ ಸಣ್ಣ-ಪುಟ್ಟ ಅಸಮಾಧಾನಗಳಿದ್ದರೂ ಯಡಿಯೂರಪ್ಪ ಚರ್ಚಿಸಿ ಸರಿಪಡಿಸುತ್ತಾರೆ. ಇಂದು ಸಂಜೆ ಇಲ್ಲವೇ ನಾಳೆ ಎಲ್ಲವೂ ತಿಳಿಯಾಗಲಿದೆ ಎಂದರು.



## ವಲಸಿಗರ ಖಾತೆಗೆ ಕತ್ತರಿ ಪ್ರಯೋಗ

ವಲಸಿಗರ ಪೈಕಿ ಪ್ರಭಾವಿ ಹಾಗೂ ಕ್ರಿಯಾಶೀಲರೆಂದು ಗುರುತಿಸಿಕೊಂಡಿದ್ದ ಡಾ.ಕೆ.ಸುಧಾಕರ್ ಬಳಿಯಿದ್ದ ವೈದ್ಯಕೀಯ ಶಿಕ್ಷಣ, ಶಿವರಾಮ್ ಹೆಬ್ಬಾರ್ ಬಳಿಯಿದ್ದ ಹೆಚ್ಚುವರಿ ಸಕ್ಕರೆ ಖಾತೆಗೆ ಕತ್ತರಿ ಪ್ರಯೋಗವಾಗಿದೆ. ಕೆ. ಗೋಪಾಲಯ್ಯ ಅವರಿಂದ ಆಹಾರ ಖಾತೆ ಹಿಂಪಡೆದು ತೋಟಗಾರಿಕೆ ಹಾಗೂ ಸಕ್ಕರೆ ಖಾತೆ ಮರು ಹಂಚಿಕೆ ಮಾಡಲಾಗಿದೆ. ಕೆ.ಸಿ.ನಾರಾಯಣಗೌಡ ಬಳಿಯಿದ್ದ ಪೌರಾಡಳಿತ, ತೋಟಗಾರಿಕೆ, ರೇಷ್ಮೆ ಖಾತೆ ವಾಪಸ್ ಪಡೆದು ಯುವಜನ ಸಬಲೀಕರಣ, ಕ್ರೀಡೆ ಜತೆಗೆ ವಕ್ಫ್, ಹಜ್ ಖಾತೆಯನ್ನೂ ನೀಡಲಾಗಿದೆ. ಪ್ರಭು ಚವ್ಹಾಣ್ ಬಳಿ ಪಶು ಸಂಗೋಪನೆ ಮಾತ್ರ ಉಳಿದುಕೊಂಡಿದ್ದು, ಹೆಚ್ಚುವರಿಯಾಗಿದ್ದ ವಕ್ಫ್ ಹಾಗೂ ಹಜ್ ಕೈ ಬಿಟ್ಟು ಹೋಗಿದೆ. ಆನಂದ್ ಸಿಂಗ್‌ರಿಂದ ಅರಣ್ಯ ಹಿಂಪಡೆದು ಪ್ರವಾಸೋದ್ಯಮ ನೀಡಲಾಗಿದ್ದರೆ, ಸಿ.ಸಿ.ಪಾಟೀಲ್ ಬಳಿಯಿದ್ದ ಗಣಿ-ಭೂವಿಜ್ಞಾನ ವಾಪಸ್ ಪಡೆದು ಸಣ್ಣ ಕೈಗಾರಿಕೆ, ವಾರ್ತಾ ಖಾತೆ ಮರು ಹಂಚಿಕೆ ಮಾಡಲಾಗಿದೆ. ಮುರುಗೇಶ್ ನಿರಾಣಿಗೆ ಗಣಿ, ಅರವಿಂದ ಲಿಂಬಾವಳಿಗೆ ಅರಣ್ಯ ಹಂಚಿಕೆಯಾಗಿದೆ. ಖಾತೆ ಬದಲಾವಣೆಯಿಂದ ಬೇಸರವಿಲ್ಲವೆಂದು ಸಿ.ಸಿ.ಪಾಟೀಲ್, ಆನಂದ್ ಸಿಂಗ್ ಹೇಳಿದ್ದಾರೆ.

## ಯಾರಿಗೆ ಯಾವ ಖಾತೆ

| ಸಚಿವರು | ಖಾತೆಗಳು |
|---|---|
| ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ | ಹಣಕಾಸು, ಇಂಧನ, ಬೆಂಗಳೂರು ನಗರಾಭಿವೃದ್ಧಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ, ಗುಪ್ತಚರ, ಹಂಚಿಕೆಯಾಗದೆ ಉಳಿದ ಎಲ್ಲ ಖಾತೆಗಳು |
| ಉಮೇಶ್ ಕತ್ತಿ | ಆಹಾರ ಮತ್ತು ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು |
| ಎಸ್.ಅಂಗಾರ | ಮೀನುಗಾರಿಕೆ, ಬಂದರು, ಒಳನಾಡು ಸಾರಿಗೆ |
| ಬಸವರಾಜ ಬೊಮ್ಮಾಯಿ | ಗೃಹ (ಗುಪ್ತಚರ ಹೊರತುಪಡಿಸಿ), ಕಾನೂನು ಮತ್ತು ಸಂಸದೀಯ ವ್ಯವಹಾರಗಳು |
| ಜೆ.ಸಿ.ಮಾಧುಸ್ವಾಮಿ | ವೈದ್ಯಕೀಯ ಶಿಕ್ಷಣ, ಕನ್ನಡ ಮತ್ತು ಸಂಸ್ಕೃತಿ |
| ಸಿ.ಸಿ.ಪಾಟೀಲ್ | ಸಣ್ಣ ಕೈಗಾರಿಕೆ, ವಾರ್ತಾ-ಸಾರ್ವಜನಿಕ ಸಂಪರ್ಕ |
| ಮುರುಗೇಶ್ ನಿರಾಣಿ | ಗಣಿ ಮತ್ತು ಭೂ ವಿಜ್ಞಾನ |
| ಎಂಟಿಬಿ ನಾಗರಾಜ್ | ಅಬಕಾರಿ |
| ಕೋಟ ಶ್ರೀನಿವಾಸ ಪೂಜಾರಿ | ಮುಜರಾಯಿ, ಹಿಂದುಳಿದ ವರ್ಗಗಳ ಕಲ್ಯಾಣ |
| ಡಾ.ಕೆ.ಸುಧಾಕರ್ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ |
| ಆನಂದ್ ಸಿಂಗ್ | ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ |
| ಸಿ.ಪಿ.ಯೋಗೇಶ್ವರ್ | ಸಣ್ಣ ನೀರಾವರಿ |
| ಆರ್.ಶಂಕರ್ | ಪೌರಾಡಳಿತ, ರೇಷ್ಮೆ |
| ಕೆ.ಗೋಪಾಲಯ್ಯ | ತೋಟಗಾರಿಕೆ, ಸಕ್ಕರೆ |
| ಕೆ.ಸಿ.ನಾರಾಯಣಗೌಡ | ಯುವಜನ ಸಬಲೀಕರಣ, ಕ್ರೀಡಾ, ಹಜ್-ವಕ್ಫ್ |

ಗಣಿಗಾರಿಕೆ ನಿಯಮ ಸರಳೀಕರಣಗೊಳಿಸಿ ರಾಜ್ಯದ ಆರ್ಥಿಕ ಸ್ಥಿತಿಗತಿ ಉತ್ತಮಪಡಿಸಲಾಗುವುದು. ನೆರೆಯ ರಾಜ್ಯಗಳಲ್ಲಿರುವ ಗಣಿ ನಿಯಮ ಅಧ್ಯಯನ ಮಾಡಿ, ತಜ್ಞರ ಮಾರ್ಗದರ್ಶನ ಪಡೆದು ನಿಯಮ ಸರಳೀಕರಣಗೊಳಿಸಲು ಪ್ರಯತ್ನಿಸಲಾಗುವುದು. ನನಗೆ ನೀಡಿರುವ ಖಾತೆ ಬಗ್ಗೆ ಸಂಪೂರ್ಣ ತೃಪ್ತಿಯಿದೆ.

ಗಣಿ ಮತ್ತು ಭೂ ವಿಜ್ಞಾನ ಸಚಿವ